ಆಸ್ತಿಯ ಪೂರ್ತಿ ಒಡೆತನವನ್ನು ಈಗಿಂದೀಗಲೇ ನೀಡುವಂತೆ ಕಾನೂನಿನ ತಿದ್ದುಪಡಿ, ಮಾಡಲಾಗುವುದೆ?

ಉತ್ತರ : ಶ್ರೀ ವಿ.ಎಲ್.ಪಾಟೀಲರು (ಕಂದಾಯ ಮಂತ್ರಿಗಳು).— ಅ) ಬಂದಿದೆ. ಆ) ಭೂ ಸುಧಾರಣೆ ಕಾನೂನಿನ ಪ್ರಕಾರ ಇದಕ್ಕೆ ಅವಕಾಶವಿಲ್ಲ.

ಇ) ಸಂಪೂರ್ಣ ಭೂಮೂಲೀಕರ್ತೃ ಹಕ್ಕನ್ನು 15 ವರ್ಷ ಪರಭಾರೆ ಮಾಡದಂತೆ ಕೊಡಲಾಗಿದೆ. ಮುಂದೆ ತಿದ್ದುಪಡಿ ಮಾಡುವ ಆಲೋಚನೆಯಲ್ಲಿಲ್ಲ.

ವಿಷಯ : ವಿದ್ಯುಚ್ಛಕ್ತಿ ತಯಾರಿಕೆಯನ್ನು ಹೆಚ್ಚಿಸುವ ಬಗ್ಗೆ

ಪ್ರಶ್ನೆ : 34 (83) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ) .—ಮಾನ್ಯ ಆಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರದವರ ಮುಂದಿರುವ ಯೋಜನೆಗಳೇನು:

ಆ) ಸರ್ಕಾರದವರು ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಮಾಡಿದ ಪ್ರಯತ್ನಗಳಾವುವು;

ಇ) ಕಲ್ಪಕಂ ಅಣುವಿದ್ಯುತ್ ಸ್ಥಾವರದಿಂದ ವಿದ್ಯುಚ್ಛಕ್ತಿ ಪಡೆಯಲು ಸರ್ಕಾರದವರು ಪ್ರಯತ್ನಿಸಿದ್ದಾರೆಯೇ ?

ಉತ್ತರ : ಶ್ರೀ ಜೆ ಹೆಚ್. ಪಟೇಲ್ : (ಆಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು) .—

ಅ) ರಾಜ್ಯದಲ್ಲಿ ವಿದ್ಯುತ್‌ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ, (1) ಆರನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಕೆಳಕಂಡ ಯೋಜನೆಗಳನ್ನು ಕಾರ್ಯಗತ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗಿದೆ :

ಈ ಯೋಜನೆಗಳ ಕಾರ್ಯಗಳು ನಡೆಯುತ್ತಿವೆ :

1.	ಕಾಳಿನದಿ ಜಲವಿದ್ಯುತ್ ಯೋಜನೆ (ಪ್ರಥಮ ಹಂತ)	910	ಮೆಗಾವಾಟ್‌ಗಳು
2	ರಾಯಚೂರು ಉಷ್ಣವಿದ್ಯುತ್ ಯೋಜನೆ (ಪ್ರಥಮಹಂತ)	420	ಮೆಗಾವಾಟ್‌ಗಳು
3.	ವರಾಹಿ ಜಲ ವಿದ್ಯುತ್ ಯೋಜನೆ	239	ಮೆಗಾವಾಟ್‌ಗಳು
4.	ಚಕ್ಕಾ ಅಣೆಕಟ್ಟು ಯೋಜನೆ	....	

ಹೊಸ ಯೋಜನೆಗಳು :

5.	ಕಾಳಿನದಿ ಜಲವಿದ್ಯುತ್‌ಯೋಜನೆ (2ನೇ ಹಂತ)	278	ಮೆಗಾವಾಟ್‌ಗಳು
6.	ಘಟ ಪ್ರಭಾ ಜಲ ವಿದ್ಯುತ್ ಯೋಜನೆ	32	ಮೆಗಾವಾಟ್‌ಗಳು
7.	ಮಲ್ಲಾಪುರ ಮತ್ತು ನಾಲ್ಕು ಇತರ ಸಣ್ಣಪ್ರಮಾಣದ ಜಲ ವಿದ್ಯುತ್‌ಯೋಜನೆಗಳು	13	ಮೆಗಾವಾಟ್‌ಗಳು

(2) ಏಳನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ :—

1.	ಗಂಗಾವಳಿ ಜಲ ವಿದ್ಯುತ್ ಯೋಜನೆ (ಮೊದಲ ಹಂತ)	210	ಮೆಗಾವಾಟ್‌ಗಳು
2.	ಶರಾವತಿ ಟೇಲ್‌ರೇಸ್ ಯೋಜನೆ	240	ಮೆಗಾವಾಟ್‌ಗಳು
3.	ಶಿವಪುರ ವಿದ್ಯುತ್‌ಗಾರ	18	ಮೆಗಾವಾಟ್‌ಗಳು
4.	ಆಲಮಟ್ಟಿ ಅಣೆಕಟ್ಟು ವಿದ್ಯುತ್‌ಗಾರ	268	ಮೆಗಾವಾಟ್‌ಗಳು
5.	ನೇತ್ರಾವತಿ ಜಲವಿದ್ಯುತ್‌ಯೋಜನೆ	105	ಮೆಗಾವಾಟ್‌ಗಳು
6.	ವರಾಹಿ ಟೇಲ್‌ರೇಸ್ ಯೋಜನೆ	40	ಮೆಗಾವಾಟ್‌ಗಳು
7.	ರಾಯಚೂರು ಉಷ್ಣ ವಿದ್ಯುತ್‌ಯೋಜನೆ (2ನೇ ಹಂತ)	420	ಮೆಗಾವಾಟ್‌ಗಳು
8.	ಸಣ್ಣ ವಿದ್ಯುತ್ ಯೋಜನೆಗಳು	22	ಮೆಗಾವಾಟ್‌ಗಳು

ಆ) ಈ ಮೇಲೆ ತಿಳಿಸಿದ ಯೋಜನೆಗಳಲ್ಲಿ ಕಾಳಿನದಿ ಜಲವಿದ್ಯುತ್ ಯೋಜನೇ (ಮೊದಲ ಹಂತ) ಯ ನಾಗಝರಿ ವಿದ್ಯುತ್ ಉತ್ಪಾದನಾ ಕೇಂದ್ರದ 135 ಮೆಗಾವಾಟ್ ಸಾಮರ್ಥ್ಯದ ಒಟ್ಟು ಆರು ವಿದ್ಯುತ್ ಘಟಕಗಳಲ್ಲಿ ಐದು ಘಟಕಗಳು ಈಗಾಗಲೇ ಕಾರ್ಯಾರಂಭಮಾಡಿವೆ. ಆರನೆಯ ಘಟಕ 1983-84ರ ಅಂತ್ಯದ ವೇಳೆಗೆ ಉತ್ಪಾದನೆ ಆರಂಭಿಸುವ ನಿರೀಕ್ಷೆ ಇದೆ. ಸೂಪ ಅಣೆ ಕಟ್ಟಿನ ಹಾಗೂ ಅಣೆಕಟ್ಟಿನ ವಿದ್ಯುತ್‌ಗಾರದ ನಿರ್ಮಾಣಕಾರ್ಯ ಭರದಿಂದ ಸಾಗಿದೆ.

ವರಾಹಿ ಜಲವಿದ್ಯುತ್‌ಯೋಜನೆ ಹಾಗೂ ರಾಯಚೂರು ಉಷ್ಣ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯಗಳು ಸಿವಿಲ್ ಕಾಮಗಾರಿಗಳು ಈಗಾಗಲೇ ಬಹಳಷ್ಟು ಮುಂದುವರೆದಿವೆ. ರಾಯಚೂರಿನಿಂದ 1984-85ರಲ್ಲೂ ವರಾಹಿ ಯೋಜನೆಯಿಂದ 1986-87ರಲ್ಲೂ ವಿದ್ಯುತ್ ಉತ್ಪಾದನೆ ಆರಂಭವಾಗುವ ನಿರೀಕ್ಷೆ ಇದೆ.

ಇವುಗಳ ಜೊತೆಗೆ ಪ್ರಸ್ತುತ ವರ್ಷದಲ್ಲಿ (1983-84) ಕೆಳಕಂಡ ಯೋಜನೆಗಳ ಕಾರ್ಯವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

1. ಕಾಳಿನದಿ ಯೋಜನೆ (2ನೇ ಹಂತ)
2. ಘಟಪ್ರಭಾ ಯೋಜನೆ
3. ಮಲ್ಲಾಪುರ ಮತ್ತು 4 ಇತರ ಸಣ್ಣ ಜಲವಿದ್ಯುತ್ ಯೋಜನೆಗಳು.

ಶರಾವತಿ ಟೇಲ್‌ರೇಸ್, ಶಿವಪುರ ವಿದ್ಯುತ್‌ಗಾರ ಯೋಜನೆ ಹಾಗೂ ರಾಯಚೂರು ಉಷ್ಣ ವಿದ್ಯುತ್ ಯೋಜನೆ (2ನೇ ಹಂತ)ಗಳ ಯೋಜನಾ ವರದಿಗಳನ್ನು ತಯಾರಿಸಿ ಕೇಂದ್ರ ವಿದ್ಯುತ್ ಪ್ರಾಧಿಕಾರ ಹಾಗೂ ಯೋಜನಾ ಆಯೋಗದ ಅನುಮತಿಗಾಗಿ ಕಳುಹಿಸಲಾಗಿದೆ.

ಇ) ಹೌದು.

ದಕ್ಷಿಣ ವಲಯದ ವಿದ್ಯುಚ್ಛಕ್ತಿ ಮಂತ್ರಿಗಳ ಸಭೆಯಲ್ಲಿ, ಕೇಂದ್ರ ವಿದ್ಯುಚ್ಛಕ್ತಿ ರಾಜ್ಯ ಮಂತ್ರಿಗಳ ಮುಂದೆ ಈ ವಿಷಯವನ್ನು ಒತ್ತಾಯಿಸಲಾಯಿತು.

ರೈತರಿಂದ ಸಹಕಾರ ಸಂಘಗಳ ಸಾಲವನ್ನು ವಸೂಲು ಮಾಡುವುದು

ಪ್ರಶ್ನೆ : 35 (73) ಶ್ರೀ. ಪಂಪಾಪತಿ (ದಾವಣಗೆರೆ) .— ಮಾನ್ಯಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ : —

ಅ) ಸರಕಾರದವರು ಸಹಕಾರಿ ಸಂಸ್ಥೆಗೆ ಸಾಲ ಮರುಪಾವತಿ ಬಗ್ಗೆ ತೋರಿಸಿದ ರಿಯಾಯಿತಿ ದೆಸೆಯಿಂದ ಎಷ್ಟು ಹಣ ರೈತರಿಂದ ಮರುಪಾವತಿಯಾಗಿದೆ;

ಆ) ಈ ರಿಯಾಯಿತಿ ಉಪಯೋಗ ಪಡೆದ ಪರಿಣಾಮವಾಗಿ ಶ್ರೀಮಂತ ರೈತರಿಂದ ಮರು ಪಾವತಿಯಾದ ಮೊಬಲಗು ಎಷ್ಟು;

ಇ) ಸಣ್ಣ ರೈತರಿಂದ ಮರುಪಾವತಿಯಾದ ಮೊಬಲಗು ಎಷ್ಟು;

ಈ) ಸಾಲ ಮರುಪಾವತಿ ಮಾಡದಿರುವವರಿಗೆ ಮತ್ತೆ ಕಾಲಾವಕಾಶ ಕೊಡಲಾಗುವದೆ ?

ಉತ್ತರ : ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು) .— ಅ) ಒಟ್ಟು ರೂ. 118.97 ಕೋಟಿಯಷ್ಟು ವಸೂಲಿಯಾಗಿದೆ.

ಆ) ರೂ. 72.16 ಕೋಟಿ.

ಇ) ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಮರುಪಾವತಿಯಾದ ಮೊಬಲಗು ರೂ. 46.81 ಕೋಟಿಗಳು.

ಈ) ಇಲ್ಲ.

ರೈತರಿಗೆ ಬಡ್ಡಿ, ಸುಸ್ತಿ ಬಡ್ಡಿ ವಿನಾಯಿತಿ

ಪ್ರಶ್ನೆ : 36 (80) ಶ್ರೀ. ಜಿ. ಎಸ್ ಬಸವರಾಜ (ಅರಸಿಕೆರೆ).— ಮಾನ್ಯಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದ ರೈತರಿಗೆ ಜೂನ್ 30ನೇ ತಾರೀಖಿನೊಳಗೆ ಸಾಲ ಮರುಪಾವತಿ ಮಾಡಿದವರಿಗೆ ಬಡ್ಡಿ ಸುಸ್ತಿ ಬಡ್ಡಿ ವಿನಾಯಿತಿ ಘೋಷಿಸಿರುವುದು ನಿಜವೆ ;

ಆ) ರಾಜ್ಯದ 16 ಜಿಲ್ಲೆಗಳು ಬರಗಾಲ ಪ್ರದೇಶವೆಂದು ಸರ್ಕಾರ ಘೋಷಿಸಿರುವುದು ನಿಜವೇ ;

ಇ) ಹಾಗಿದ್ದಲ್ಲಿ ಜೂನ್ 30ನೇ ತಾರೀಖು ಸಾಲ ವಾಪಸಾತಿಗೆ ಗಡುವು ಮಾಡಿರುವುದರಿಂದ ರೈತರಿಗೆ ತೊಂದರೆಯಾಗಿದೆಯಿಲ್ಲವೇ ?

ಉತರ : ಆರ್. ಎಲ್. ಜಾಲಪ್ಪ : (ಸಹಕಾರ ಸಚಿವರು) .—ಅ) ಹೌದು 1) 30-6-1982 ರಂದು ಸುಸ್ತಿದಾರ ರಾಗಿದ್ದು 30-6-83ರ ಒಳಗೆ ಸಾಲ ತೀರಿಸಿದವರಿಗೆ 30-6-82ರ ಸುಸ್ತಿ ಸಾಲದ ಮೇಲಿನ ಪೂರ್ಣ ಬಡ್ಡಿ, ಸುಸ್ತಿ ಬಡ್ಡಿಯನ್ನು ಸರಕಾರ ರೈತರ ಪರವಾಗಿ ತುಂಬುತ್ತಿದೆ. ಆದ್ದರಿಂದ ರೈತರ ಬಗ್ಗೆ ಹೇಳುವುದಾದರೆ 30-6-82 ರಂದಿದ್ದ ಸುಸ್ತಿ ಸಾಲದ ಹಣ 30-6-83ರ ಒಳಗೆ ಪೂರ್ತಿ ಪಾವತಿ ಮಾಡಿದ್ದಲ್ಲಿ ಆ ಸಾಲದ ಮೇಲಿನ ಬಡ್ಡಿಯನ್ನು ರೈತರು ಕೊಡಬೇಕಾದ್ದಿಲ್ಲ.

2) ಚಾಲ್ತಿ ಸಾಲವನ್ನು 30-6-83ರ ಒಳಗೆ ಕಟ್ಟಿದವರಿಗೆ ಶೇ. 5 ರಿಂದ 5 1/2 ಯಷ್ಟು ಬಡ್ಡಿ ರಿಯಾಯಿತಿಯನ್ನು ಕೊಡಲಾಗಿದೆ. ಆ ರಿಯಾಯಿತಿ ಹಣವನ್ನು ಸರಕಾರ ಸಬ್ಸಿಡಿ ರೂಪದಲ್ಲಿ ತುಂಬುತ್ತಿದೆ.

ಆ) 16 ಜಿಲ್ಲೆಗಳಲ್ಲಿ ಅಭಾವ ಪೀಡಿತ ಪರಿಸ್ಥಿತಿ ಇದೆಯೆಂದು ಸರ್ಕಾರ ಪರಿಗಣಿಸಿದೆ.

ಇ) ಇಲ್ಲ. ಏಕೆಂದರೆ ಸಹಕಾರಿ ಸಾಲಗಳನ್ನು ಅವಶ್ಯವಿದ್ದೆಡೆಗಳಲ್ಲಿ ಪರಿವರ್ತಿಸಲು ಅಥವಾ ಕಂತುಗಳ ಪುನರ್ನಿಗದಿ ಮಾಡಲು ಅವಕಾಶ ಮಾಡಿಕೊಡಲಾಗಿದೆ.

ರಾಜ್ಯದಲ್ಲಿ ಸಹಕಾರ ಸಂಘಗಳಿಂದ ರೈತರು ಪಡೆದ ಸಾಲ

ಪ್ರಶ್ನೆ : 37 (19) ಶ್ರೀ. ಕೆ. ಹೆಚ್ ಕುರದಗಿ : (ಮುಂಡರಗಿ) .—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿ ಸಹಕಾರಿ ಸಂಘ ಸಂಸ್ಥೆಗಳಿಂದ ರೈತರು ಪಡೆದ ಸಾಲದ ಮೇಲೆ ಬಡ್ಡಿ ವಜಾ